## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ ಬೀಜ ನಿಗಮದ ಹಿಂಗಾರು ಬೇಸಿಗೆ-2016-17ರ ಹಂಗಾಮಿನಲ್ಲಿ ವಿವಿಧ ಭತ್ತದ ತಳಿ ಹಾಗೂ ನೆಲಗಡಲೆ ಬೀಜಗಳ ಬೀಜೋತ್ಪಾಧನೆ ಮತ್ತು ವಿಲೇವಾರಿ ವಹಿವಾಟಿನ ತನಿಖೆಗಾಗಿ ಸಮಿತಿ ರಚನೆ ಕುರಿತು.

**ಓದಲಾಗಿದೆ:** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಇವರ ಪತ್ರ ಸಂ:ಕರಾಬೀನಿ/ಆಡಳಿತ/2337/2019-20, ದಿ:01.10.2019.

******

**ಪ್ರಸ್ತಾವನೆ :**

ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಇವರ ಪತ್ರದಲ್ಲಿ 2016-17ನೇ ಸಾಲಿನಲ್ಲಿ ಹಿಂಗಾರು ಬೇಸಿಗೆ ಹಂಗಾಮಿನಲ್ಲಿ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆ ಇದ್ದುದರಿಂದ ವಿವಿಧ ಭತ್ತದ ತಳಿಗಳ ಬೀಜಗಳನ್ನು ಉತ್ಪಾದಿಸುವ ಗುರಿ ಕುಂಠಿತಗೊಂಡಿದ್ದರಿಂದ ದಿ:29.11.2016 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ ಸಭೆಯ ನಿರ್ಣಯದಂತೆ 2016-17ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಆಂಧ್ರ ಪ್ರದೇಶದ ನಂದ್ಯಾಲ ಗ್ರಾಮದಲ್ಲಿ ವಿವಿಧ ಭತ್ತದ ತಳಿಗಳ ಪ್ರಮಾಣಿತ ಬೀಜಗಳನ್ನು ಬೀಜೋತ್ಪಾದನೆ ಮಾಡಿ 2017ರ ಮುಂಗಾರು ಹಂಗಾಮಿನಲ್ಲಿ ಮಾರಾಟ ಮಾಡಿ ಉಳಿದ ಬೀಜವನ್ನು ದಿ:28.07.2018 ರಂದು ನಡೆದ ನಿರ್ದೇಶಕರ ಮಂಡಳಿಯ ನಿರ್ಣಯದಂತೆ 5716.25 ಕ್ವಿಂಟಾಲ್ ಮತ್ತು 198.52 ಕ್ವಿಂಟಾಲ್ ಅನುಪಯುಕ್ತ ಬೀಜಗಳನ್ನು ಎನ್‌ಸಿಡಿಇಕ್ಸ್ ಮುಖಾಂತರ ವಿಲೇವಾರಿ ಮಾಡಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಸದರಿ ಕ್ರಮದ ಪಾರದರ್ಶಕತೆಯ ಬಗ್ಗೆ ದಿ:17.09.2018 ರ ಆದೇಶದನ್ವಯ ದಾಖಲಾತಿಗಳನ್ನು ಪರಿಶೀಲಿಸಲು ನೇಮಿಸಿದ ಸಮಿತಿಯು ದಿ:25.01.2019 ರಂದು ವರದಿ ಸಲ್ಲಿಸಿರುತ್ತದೆ. ದಿ:02.07.2019 ರಂದು ನಡೆದ 292ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಸದರಿ ತನಿಖಾ ವರದಿಯನ್ನು ಒಪ್ಪದೇ ಬೇರೊಂದು ಪ್ರತ್ಯೇಕ ಸಮಿತಿಯನ್ನು ರಚಿಸಬೇಕೆಂದು ನಿರ್ಣಯಿಸಲಾಗಿರುತ್ತದೆ. ಸದರಿ ನಿರ್ಣಯದಂತೆ ಸರ್ಕಾರದಿಂದ ಪ್ರತ್ಯೇಕ ಸಮಿತಿಯನ್ನು ರಚಿಸಿ ಆದೇಶ ಹೊರಡಿಸುವಂತೆ ವ್ಯವಸ್ಥಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ಇವರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 67 ಕೃಉಇ 2019, ಬೆಂಗಳೂರು. ದಿನಾಂಕ: 31-10-2019.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಬೀಜ ನಿಗಮವು ಹಿಂಗಾರು ಬೇಸಿಗೆ ಹಂಗಾಮು 2016-17ನೇ ಸಾಲಿನಲ್ಲಿ ಆಂಧ್ರ ಪ್ರದೇಶದ ನಂದ್ಯಾಲದಲ್ಲಿ ವಿವಿಧ ತಳಿಗಳ ಪ್ರಮಾಣಿತ ಭತ್ತದ ಬೀಜ ಹಾಗೂ ನೆಲಗಡಲೆ ಬೀಜೋತ್ಪಾದನೆಯನ್ನು ಕೈಗೊಂಡು ಅದನ್ನು ಮುಂಗಾರು 2017ನೇ ಸಾಲಿನಲ್ಲಿ ಮಾರಾಟ ಮಾಡಿ ಉಳಿದ ಬೀಜಗಳನ್ನು ಅನುಪಯುಕ್ತ ಬೀಜವಾಗಿ ವಿಲೇವಾರಿ ಮಾಡಲಾದ

ವಹಿವಾಟಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ನೀಡಲು ಈ ಕೆಳಕಂಡ ಸಮಿತಿಯನ್ನು ರಚಿಸಿ ಸರ್ಕಾರವು ಆದೇಶಿಸಿದೆ.

| ಕ್ರ.ಸಂ. | ಹುದ್ದೆ ಮತ್ತು ಪದನಾಮ | ವಿವರ |
|---|---|---|
| 1 | ಶ್ರೀ ಶಿವರಾಜು, ವ್ಯವಸ್ಥಾಪಕ ನಿರ್ದೇಶಕರು, ಕೆಪೆಕ್, ಬೆಂಗಳೂರು | ಅಧ್ಯಕ್ಷರು |
| 2 | ಪ್ರೊ. ರಾಜಣ್ಣ, UAS, ಬೆಂಗಳೂರು | ಸದಸ್ಯರು |
| 3 | ಶ್ರೀ ದಿವಾಕರ್, ಅಪರ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿ |

ಸದರಿ ಸಮಿತಿಯು ಒಂದು ತಿಂಗಳೊಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

BSNagarathnam

**(ಬಿ.ಎಸ್.ನಾಗರತ್ನಮ್ಮ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)
31/10

<u>ಇವರಿಗೆ:-</u>

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕೆಪೆಕ್, ಬೆಂಗಳೂರು.
6. ಪ್ರೊ.ರಾಜಣ್ಣ, ಕೃಷಿ ವಿಶ್ವ ವಿದ್ಯಾನಿಲಯ,(UAS) ಬೆಂಗಳೂರು.
7. ಶ್ರೀ ದಿವಾಕರ್, ಅಪರ ನಿರ್ದೇಶಕರು, ಕೃಷಿ ಆಯುಕ್ತರ ಕಚೇರಿ, ಬೆಂಗಳೂರು.
8. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

*****